ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯ ಆವರಣ
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - 560018.

कर्नाटक-संस्कृत-विश्वविद्यालयः
श्री चामराजेन्द्र संस्कृत महापाठशालायाः प्रांगणम्
पम्पमहाकविमार्गः, चामराजपेटे, बेङ्गलूरु - ५६००१८.

ವಿಷಯ: ಸೃಜನೆಗೊಂಡ ಯುಜಿಸಿ ವೇತನಶ್ರೇಣಿಯ ಬೋಧಕ ಹುದ್ದೆಯನ್ನು ಭರ್ತಿ ಮಾಡಿಕೊಳ್ಳುವ ಬಗೆಗೆ.

ಉಲ್ಲೇಖ:
1. ದಿನಾಂಕ 2013ರ ಜೂನ್ 13ರಂದು ನಡೆದ 'ಆಯ್ಕೆ ಸಮಿತಿ' ಸಭೆಯ ಶಿಫಾರಸ್ಸು.
2. ದಿನಾಂಕ: 14.06.2013ರಂದು ನಡೆದ ಪ್ರಶಾಸನ ಸಮಿತಿ 15ನೇ ಸಭೆ ನಿರ್ಣಯ ಸಂಖ್ಯೆ: 06ರ ಅನುಮೋದನೆ ಹಾಗೂ ಅಂಗೀಕಾರ.

**ಪ್ರಸ್ತಾವನೆ:**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಸಂಖ್ಯೆ ಇಡಿ 91 ಯುಆರ್‌ಸಿ 2010; ದಿನಾಂಕ: 25.01.2011ರ ಸರ್ಕಾರಿ ಆದೇಶದಂತೆ ಯುಜಿಸಿ ವೇತನ ಪಡೆಯುವ ಬೋಧಕ ಹುದ್ದೆಗಳು ಸೃಜನೆಗೊಂಡಿದ್ದವು. ಸಂಖ್ಯೆ ಇಡಿ 213 ಯುಆರ್‌ಸಿ 2011; ದಿನಾಂಕ: 25.05.2012ರ ಅನ್ವಯ 'ವೃಂದ ಮತ್ತು ನೇಮಕಾತಿ ಪರಿನಿಯಮ-2012' ಅನುಮೋದನೆಗೊಂಡಿತ್ತು. ದಿನಾಂಕ: 16.06.2012ರಂದು ನಡೆದ ಪ್ರಶಾಸನ ಸಮಿತಿ 5ನೇ ಸಭೆಯಲ್ಲಿ ಯುಜಿಸಿ ವೇತನಶ್ರೇಣಿ ಪಡೆಯುವ ಬೋಧಕ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆಗೆ ಅನುಮತಿಯನ್ನು ಪಡೆಯಲಾಗಿತ್ತು. ಮಾನ್ಯ ಕುಲಪತಿಗಳ ಒಪ್ಪಿಗೆ ಕಂಡಿಕೆ ಸಂಖ್ಯೆ: 73; ದಿನಾಂಕ: 03.06.2013ರ ಅನ್ವಯ ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2000; ಸೆಕ್ಷನ್ 57ರಲ್ಲಿ ಸೂಚಿಸಿರುವಂತೆ 'ಯುಜಿಸಿ ವೇತನಶ್ರೇಣಿಯ ಬೋಧಕ ಸಿಬ್ಬಂದಿಗಳ ಆಯ್ಕೆ ಸಮಿತಿ'ಯನ್ನು ರಚಿಸಲಾಗಿತ್ತು. ದಿನಾಂಕ 2013ರ ಜೂನ್ 13ರಂದು ನಡೆದ 'ಆಯ್ಕೆ ಸಮಿತಿ' ಸಭೆಯ ಶಿಫಾರಸ್ಸಿನ ಅನ್ವಯ ದಿನಾಂಕ: 14.06.2013ರಂದು ನಡೆದ ಪ್ರಶಾಸನ ಸಮಿತಿ 15ನೇ ಸಭೆಯ ನಿರ್ಣಯ ಸಂಖ್ಯೆ: 06ರ ಅನುಮೋದನೆಯ ಹಿನ್ನೆಲೆಯಲ್ಲಿ ಸೇವಾನುಭವ, ಜ್ಯೇಷ್ಠತೆ ಮತ್ತು ಶೈಕ್ಷಣಿಕ ಅರ್ಹತೆಯನ್ನು ಕ್ರಮಾನುಸಾರವಾಗಿ ಪರಿಗಣಿಸಿ ತಕ್ಷಣ ಜಾರಿಗೆ ಬರುವಂತೆ ನೇಮಕಾತಿ ಆದೇಶವನ್ನು ಹೊರಡಿಸಲಾಗಿದೆ.

## ನೇಮಕಾತಿ ಆದೇಶ

ಸಂಖ್ಯೆ: ಕಸಂವಿ/ಯುಜಿಸಿ-ವೇ.ಶ್ರೇ.1/ಪ್ರಾ/2013-14

ದಿನಾಂಕ: 14.06.2013

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳ ಅನ್ವಯ **ಡಾ. ವಿ. ಗಿರೀಶ್ ಚಂದ್ರ** -ಇವರನ್ನು **ಭಾಷಾ ನಿಕಾಯದ ಪ್ರಾಧ್ಯಾಪಕ** ಹುದ್ದೆಗೆ ವೇತನಶ್ರೇಣಿ: ರೂ. 37,400-67,000 with AGP of Rs. 10,000/- ಹಾಗೂ ಇತರೆ ಭತ್ಯೆಗಳ ಸಹಿತ ತಕ್ಷಣ ಜಾರಿಗೆ ಬರುವಂತೆ ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿದೆ. ನೇಮಕಾತಿ ಹೊಂದಿದ ನೌಕರರ ಎರಡು ವರ್ಷದ ಪ್ರೊಬೇಷನರಿ ಅವಧಿ ತೃಪ್ತಿಕರವಾಗಿ ಮುಗಿದ ನಂತರ ಇವರ ಹುದ್ದೆ ಖಾಯಂಗೊಳ್ಳುತ್ತದೆ. ಈ ಆದೇಶ ಹೊರಡಿಸಿದ ಒಂದು ವಾರದ ಒಳಗೆ ಕೆಲಸದ ಮೇಲೆ ವರದಿ ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಈ ಆದೇಶವು ರದ್ದಾಗುತ್ತದೆ.

**ಆದೇಶದ ಮೇರೆಗೆ,**

ಕುಲಸಚಿವರು

ಇವರಿಗೆ,

ಡಾ. ವಿ. ಗಿರೀಶ್ ಚಂದ್ರ
ಸಹಾಯಕ ಪ್ರಾಧ್ಯಾಪಕರು, ಸಂಸ್ಕೃತ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಪಾವಟೆನಗರ, ಧಾರವಾಡ - 580003.

ಪ್ರತಿಗಳು:

1. **ಮಾನ್ಯ ಕುಲಪತಿಗಳ ಆಪ್ತಶಾಖೆ**, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
2. **ಹಣಕಾಸು ಅಧಿಕಾರಿಗಳು**, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು.
3. ಕಛೇರಿ ಪ್ರತಿ
4. ರಕ್ಷತಾ ಪ್ರತಿ

ದೂರವಾಣಿ: 080 - 26701303 / 26705387; ಇ-ಮೇಲ್: karnatakasanskrituniversity@gmail.com
दूरवाणी: ०८०-२६७०१३०३; २६७०५३८७; ई-सङ्केतः - karnatakasanskrituniversity@gmail.com

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - 560018.

**कर्नाटक-संस्कृत-विश्वविद्यालय:**

श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु - ५६००१८.


ಕಸಂವಿ/ಸಿಬ್ಬಂದಿ/ಯುಜಿಸಿ/ಪ್ರಾ01/2013-14

ದಿನಾಂಕ: 08.07.2015

## ಜ್ಞಾಪನಾ

ವಿಷಯ: ಡಾ. ವಿ. ಗಿರೀಶ್ ಚಂದ್ರ ಪ್ರಾಧ್ಯಾಪಕರು (ಭಾಷಾ ನಿಕಾಯ), ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು ಇವರ ಖಾಯಂ ಪೂರ್ವ ಸೇವಾವಧಿ ತೃಪ್ತಿಕರ ಎಂದು ಘೋಷಿಸುವ ಬಗೆಗೆ.

ಉಲ್ಲೇಖ:
1. ನೇಮಕಾತಿ ಆದೇಶ ಸಂಖ್ಯೆ: ಕಸಂವಿ/ಯುಜಿಸಿ-ವೇ.ಶ್ರೇ.1/ಪ್ರಾ/2013-14, ದಿನಾಂಕ:14.06.2013
2. ಕರ್ನಾಟಕ ನಾಗರಿಕ ಸೇವೆಗಳ(ಪ್ರೊಬೇಷನ್) ನಿಯಮಗಳು, ಅಧಿಸೂಚನೆ ಸಂಖ್ಯೆ ಡಿಪಿಎಆರ್ 57 ಎಸ್‌ಆರ್‌ಆರ್ 75, ದಿನಾಂಕ: 25.06.1977.
3. ದಿನಾಂಕ:22.12.2014ರ 24 ನೇ ಪ್ರಶಾಸನ ಸಮಿತಿ ಸಭೆಯ ನಿರ್ಣಯ.
4. ಮಾನ್ಯ ಕುಲಪತಿಗಳ ಒಪ್ಪಿಗೆ ಕಂಡಿಕೆ ಸಂಖ್ಯೆ: 78, ದಿನಾಂಕ: 08.07.2015.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರಲ್ಲಿ ಡಾ. ವಿ. ಗಿರೀಶ್ ಚಂದ್ರ ರವರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಭಾಷಾ ನಿಕಾಯದ ಪ್ರಾಧ್ಯಾಪಕರ ಹುದ್ದೆಗೆ ನೇಮಕಗೊಂಡಿರುತ್ತಾರೆ. ಇವರು 02 ವರ್ಷಗಳ ಸೇವೆಯನ್ನು ತೃಪ್ತಿಕರವಾಗಿ ಪೂರೈಸಿರುವುದರಿಂದ ಉಲ್ಲೇಖ (02) ಆದೇಶದನ್ವಯ ಹಾಗೂ ಉಲ್ಲೇಖ (03)ರ ನಿರ್ಣಯ ಹಾಗೂ ಉಲ್ಲೇಖ (4)ರ ಮಾನ್ಯ ಕುಲಪತಿಗಳ ಆದೇಶದಂತೆ ಭಾಷಾ ನಿಕಾಯದ ಪ್ರಾಧ್ಯಾಪಕರ 02 ವರ್ಷಗಳ ಖಾಯಂ ಪೂರ್ವ ಸೇವಾವಧಿಯನ್ನು ಈ ಕೆಳಕಂಡ ಕಾಲಂ [05] ರಲ್ಲಿ ನಮೂದಿಸಿರುವ ದಿನಾಂಕದಿಂದ ಜಾರಿಗೆ ಬರುವಂತೆ ಈ ಕೆಳಗಿನ ಷರತ್ತಿನಂತೆ ಸೇವೆಯನ್ನು ತೃಪ್ತಿಕರವಾಗಿ ಪೂರೈಸಿರುವರೆಂದು ಘೋಷಿಸಿದೆ.

| ಕ್ರಸಂ. | ಹೆಸರು, ಹುದ್ದೆ ಮತ್ತು ವಿಳಾಸ | ಸೇವೆಗೆ ಸೇರಿದ ದಿನಾಂಕ | ಸೇವೆಗೆ ಸೇರಿ 02 ವರ್ಷ ಪೂರ್ಣಗೊಂಡ ದಿನಾಂಕ | ಖಾಯಂ ಪೂರ್ವ ಸೇವಾವಧಿ ತೃಪ್ತಿಕರ ಎಂದು ಘೋಷಿಸಿರುವ ದಿನಾಂಕ |
|---|---|---|---|---|
| 1 | 2 | 3 | 4 | 5 |
| 01. | ಡಾ. ವಿ. ಗಿರೀಶ್ ಚಂದ್ರ ಪ್ರಾಧ್ಯಾಪಕರು (ಭಾಷಾ ನಿಕಾಯ), ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು. | 18.06.2013 | 17.06.2015 | 18.06.2015 |

ಷರತ್ತು: ಇವರ ನೇಮಕಾತಿ ಪ್ರಶ್ನಿಸಿ ಕರ್ನಾಟಕ ರಾಜ್ಯದ ಉಚ್ಚನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಾಗಿರುವುದರಿಂದ (ರಿಟ್ ಪಿಟಿಷನ್ ಸಂಖ್ಯೆ: 31097/2013) ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟು ಮಾನ್ಯ ಕುಲಪತಿಗಳ ಆದೇಶಾನುಸಾರ ಖಾಯಂಪೂರ್ವ ಸೇವಾವಧಿಯು ತೃಪ್ತಿಕರವಾಗಿದೆಯೆಂದು ಘೋಷಿಸಿದೆ.

ಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು-18.

ಪ್ರತಿಗಳು,

1. ಡಾ. ವಿ. ಗಿರೀಶ್ ಚಂದ್ರ ಪ್ರಾಧ್ಯಾಪಕರು (ಭಾಷಾ ನಿಕಾಯ), ಕಸಂವಿ. 2. ಮಾನ್ಯ ಕುಲಪತಿಗಳ ಆಪ್ತಶಾಖೆ, ಕಸಂವಿ.
3. ಹಣಕಾಸು ಅಧಿಕಾರಿಗಳು, ಕಸಂವಿ. 4. ಕಛೇರಿ ಪ್ರತಿ/ರಕ್ಷತಾ ಪ್ರತಿ.

Scanned with CamScanner